ಪಿ ಡಬ್ಲ್ಯೂ 1

ದಿನಾಂಕ 15-02-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಈ ಕೆಳಕಂಡಂತೆ ದಾಖಲೆಗಳನ್ನು ಹಾಜರಪಡಿಸುತ್ತಿದ್ದೇನೆ.

2. ದಿನಾಂಕ 03-02-1947 ರ ನೊಂದಾಯಿತ ಖರೀದಿ ಪತ್ರದ ಧೃಢೀಕೃತ ನಕಲನ್ನು **ನಿಪಿ 1** ಎಂದು, ದಿನಾಂಕ 25-04-1944 ಹಾಗೂ 20-04-1947 ರ ಹಕ್ಕು ಬದಲಾವಣೆ ಟಿಪ್ಪಣಿಯ ಧೃಢೀಕೃತ ನಕಲುಗಳನ್ನು **ನಿಪಿ 2 ಮತ್ತು 3** ಎಂದು, ದಿನಾಂಕ 12-03-1977 ರ ಮಂಜೂರಾತಿ ಪತ್ರದ ಧೃಢೀಕೃತ ನಕಲನ್ನು **ನಿಪಿ 4** ಎಂದು, ದಿನಾಂಕ 12-08-1997 ರ ಮಂಜೂರಾತಿ ಆದೇಶವನ್ನು **ನಿಪಿ 5** ಎಂದು, ಡ ಸಂಖ್ಯೆ 26, ದಿನಾಂಕ 23-10-2009 ನ್ನು ಹಾಗೂ ಅದರೊಂದಿಗಿನ ಧೃಢೀಕೃತ ನಕಲನ್ನು ಒಟ್ಟಾಗಿ **ನಿಪಿ 6** ಎಂದು, ದಿನಾಂಕ 24-11-1997 ರ ಡ ಸಂಖ್ಯೆ 934 ರ ಹಕ್ಕು ಬದಲಾವಣೆ ಟಿಪ್ಪಣಿ ಧೃಢೀಕೃತ ನಕಲನ್ನು **ನಿಪಿ 7** ಎಂದು, 1966 ರಿಂದ 1984 ಹಾಗೂ 1993 ರಿಂದ 2004 ರ ವರೆಗಿನ ಎರಡು ಆರ್ ಟಿ ಸಿ ಗಳನ್ನು ಧೃಢೀಕೃತ ನಕಲುಗಳನ್ನು **ನಿಪಿ 8** ಎಂದು, 1940 ರಿಂದ 1950 ರ ವರೆಗಿನ ಆರ್ ಟಿ ಸಿ ಯ ಧೃಢೀಕೃತ ನಕಲನ್ನು **ನಿಪಿ 9** ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.